

## ಎಲೆಗಳ ತುದಿಗೆ ಅಮೃತದಾ ಬಿಂದು...

‘ಕವಿ ಜೇವದ ಬ್ಯಾಸರ ಹರಿಸಾಕ / ಹಾಡ ನುಡಿಸಾಕ / ಹೆಚ್ಚಿಗೇನು ಬೇಕ? / ಒಂದು ಹೂತ ಹುಣಸಿಮರ ಸಾಕ’ ಎಂದರು ವರಕವಿ ಬೇಂದ್ರೆ. ಅಜ್ಜ ಹೇಳಿದ್ದು ಖರೆ – ಮರವೇನು, ಒಂದು ಎಲೆಯೂ ಕವಿತೆಗೆ ಬೀಜವಾಗಬಲ್ಲದು. ಇಲ್ಲಿನ ಹಣ್ಣಾದ ಎಲೆಯನ್ನೇ ನೋಡಿ. ಜೀವನಸಂಧ್ಯೆಯನ್ನು ಸೂಚಿಸುವಂತಿರುವ ಎಲೆ ಇಲ್ಲಿದೆ. ಆ ಎಲೆಗೆ ಪ್ರಭಾವಳಿಯಂತೆ ಸಾಲುಗಟ್ಟಿರುವ ಮುತ್ತಿನಮಣಿಗಳಂತಹ ನೀರಬಿಂದುಗಳು ತಾರುಣ್ಯದ ಸಂಕೇತದಂತೆ ಕಾಣಿಸುತ್ತಿವೆ. ಮುಪ್ಪು ಮತ್ತು ತಾರುಣ್ಯಗಳ ಮುಖಾಮುಖಿ ಬದುಕೆಂಬ ಕಾವ್ಯದ ಕೇಂದ್ರಬಿಂದುವೂ ಹೌದಲ್ಲವೇ? ಈ ‘ನಿರಾಭರಣ ಸುಂದರಿ’ಯಂಥ ಎಲೆ ಕಲಾಕೃತಿ ನಿಮ್ಮೊಳಗೆ ಉದ್ದೀಪಿಸುವ ಭಾವ ಯಾವ ಬಗೆಯದು? ಕವಿತೆಯ ಸಾಲುಗಳನ್ನು ಹೆಕ್ಕಿ ನಮಗೆ ಕಳಿಸಿ.

ನಿಮ್ಮ ಕವಿತೆ ಡಿಸೆಂಬರ್ 15ರೊಳಗೆ ನಮ್ಮನ್ನು ತಲುಪಲಿ.

ವಿಳಾಸ: ಕಲ್ಪನೆ ವಿಭಾಗ, ‘ಮಯೂರ’
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560 001
ಇ–ಮೇಲ್: editormy@mayura.co.in